# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ /ಸಹಾಯಕ ಇಂಜಿನಿಯರ್‌ರವರ ಕಛೇರಿ, ಶಂಕರಮಠ ವಾರ್ಡ್ ಸಂಖ್ಯೆ: 75,
15ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಕಿರ್ಲೋಸ್ಕರ್ ಕಾಲೋನಿ, 3ನೇ ಹಂತ, ಬೆಂಗಳೂರು-79.


ಸಂಖ್ಯೆ: ವಾ-75/ವಾ.ಸ./ಸಭಾನಡವಳಿ-21/2021-22 ದಿನಾಂಕ: 18 /02/2021

## -:ಸಭೆಯ ನಡವಳಿಗಳು:-

ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ: 09/02/2022 ಬುಧವಾರದಂದು ಬೆಳಗ್ಗೆ 10.00 ಘಂಟೆಗೆ ವಾರ್ಡ್-75 ಶಂಕರಮಠದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ಆಯೋಜಿಸಲಾಯಿತು.

ಶ್ರೀ ಬೆನಕೇಶ್ ಆರ್. ವಾರ್ಡ್ ಸಮಿತಿಯ, ಕಾರ್ಯದರ್ಶಿಗಳು ರವರು ಸಭೆಯನ್ನು ನಡೆಸುತ್ತಾ, ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಭಂಧಿಸಿದಂತೆ ಹಾಗೂ ಕೋವಿಡ್-19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಶ್ರೀ ಬೆನಕೇಶ್ ಆರ್. ರವರು ಸಭೆಗೆ ಸ್ವಾಗತ ಕೋರುತ್ತಾ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

**<u>ಸಭೆಯಲ್ಲಿ ಹಾಜರಿದ್ದವರು:-</u>**

| | |
|---|---|
| 1 | ಶ್ರೀ. ಎಲ್. ಸುರೇಶ್, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್-75, ಬಿಬಿಎಂಪಿ |
| 2 | ಶ್ರೀ ಬೆನಕೇಶ್ ಆರ್. ಸಮಿತಿ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ವಾರ್ಡ್-75, ಬಿಬಿಎಂಪಿ |
| 3 | ಶ್ರೀಮತಿ ಡಾ. ಕುಸುಮ, ಮೆಡಿಕಲ್ ಆಫಿಸರ್, ಆರೋಗ್ಯ ಇಲಾಖೆ, ವಾರ್ಡ್-75, ಬಿಬಿಎಂಪಿ |
| 4 | ಶ್ರೀ ಕೆ.ವಿ.ಲೋಕೇಶ್, ಹಿರಿಯ ವೆಟರಿನರಿ ಪರಿವೀಕ್ಷಕರು, ವಾರ್ಡ್-75, ಬಿಬಿಎಂಪಿ. |
| 5 | ಶ್ರೀ ಸುನೀಲ್ ಕುಮಾರ್ ಕೆ. ಎಸ್., ಕಂದಾಯ ಪರಿವಿಕ್ಷಕರು, ವಾರ್ಡ್-75, ಶಂಕರಮಠ, ಬಿಬಿಎಂಪಿ. |
| 6 | ಶ್ರೀ ಸಿದ್ದರಾಮೇಶ್ವರ್, ಕಂದಾಯ ಪರಿವಿಕ್ಷಕರು, ವಾರ್ಡ್-75, ಶಂಕರಮಠ, ಬಿಬಿಎಂಪಿ. |
| 7 | ಶ್ರೀ ಪಾಂಡುರಂಗ. ಕಿರಿಯ ಅಭಿಯಂತರರು, ಎನ್-3 ಉಪವಿಭಾಗ, ಬೆಸ್ಕಾಂ. |
| 8 | ಶ್ರೀ ಬಿ ಶಿವಪ್ಪ, ಕಾಮಗಾರಿ ಪರಿವೀಕ್ಷಕರು, ಎನ್.ಡಬ್ಲ್ಯು-2 ಉಪವಿಭಾಗ, ಬಿ.ಡಬ್ಲ್ಯು.ಎಸ್.ಎಸ್.ಬಿ. |
| 9 | ಶ್ರೀ ಎನ್. ಮಂಜುನಾಥ್, ಮೇಸ್ತ್ರಿ, ತೋಟಗಾರಿಕೆ ವಿಭಾಗ, ವಾರ್ಡ್-75, ಬಿಬಿಎಂಪಿ. |
| 10 | ಶ್ರೀ ಎನ್. ರಮೇಶ್, ಮೇಸ್ತ್ರಿ, ಘ.ತ್ಯಾ.ನಿ. ವಿಭಾಗ, ವಾರ್ಡ್-75, ಬಿಬಿಎಂಪಿ. |
| 11 | ಶ್ರೀ ಚನ್ನವೀರಯ್ಯ, ಹೆಡ್ ಗ್ಯಾಂಗ್‌ಮನ್, ಕಾಮಗಾರಿ ವಿಭಾಗ, ವಾರ್ಡ್-75, ಬಿಬಿಎಂಪಿ. |
| 12 | ಶ್ರೀ ಸಿದ್ದರಾಜು ಸೋಸಲೆ, ವಾರ್ಡ್‌ನ ನಾಗರೀಕರು, ವಾರ್ಡ್-75. |
| 13 | ಶ್ರೀ ಆರ್. ಮಂಜುನಾಥ್, ವಾರ್ಡ್‌ನ ನಾಗರೀಕರು, ವಾರ್ಡ್-75. |
| 14 | ಶ್ರೀ ಮಂಜು, ವಾರ್ಡ್‌ನ ನಾಗರೀಕರು, ವಾರ್ಡ್-75. |
| 15 | ಶ್ರೀ ಕೆ. ವಿ. ಸುಬ್ರಮಣ್ಯ, ವಾರ್ಡ್‌ನ ನಾಗರೀಕರು, ವಾರ್ಡ್-75. |
| 16 | ಶ್ರೀ ಎನ್. ವಿ. ಬಾಹುಬಲಿ, ವಾರ್ಡ್‌ನ ನಾಗರೀಕರು, ವಾರ್ಡ್-75. |
| 17 | ಶ್ರೀಮತಿ ರೂಪ, ವಾರ್ಡ್‌ನ ನಾಗರೀಕರು, ವಾರ್ಡ್-75. |
| 18 | ಶ್ರೀ ದೀಪಕ್ ಕುಲಕರ್ಣಿ, ವಾರ್ಡ್‌ನ ನಾಗರೀಕರು, ವಾರ್ಡ್-75. |
| 19 | ಶ್ರೀ ಶಿವಕುಮಾರ್, ವಾರ್ಡ್‌ನ ನಾಗರೀಕರು, ವಾರ್ಡ್-75. |

ಪು.ತಿ.ನೋ.

Scanned by CamScanner

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-

1. **ಆರೋಗ್ಯ ಇಲಾಖೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

   - ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್-75 ಶಂಕರಮಠದಲ್ಲಿ ಕೋವಿಡ್-19ಗೆ ಸಂಭಂಧಿಸಿದಂತೆ ಮಾಹಿತಿಗಳು ವಿವರಣೆ ನೀಡುವಂತೆ ಸಭೆಯಲ್ಲಿ ತಿಳಿಸಿದರು.
   - ಶ್ರೀಮತಿ ಡಾ. ಸಾದತ್ ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಇಲ್ಲಿಯವರೆವಿಗೆ ಒಟ್ಟು 30 ಸಂಖ್ಯೆ ಆಕ್ಟಿವ್ ಕೇಸ್‌ಗಳಿದ್ದು, ಹೊಸದಾಗಿ 4 ಸಂಖ್ಯೆ ಕೇಸ್‌ಗಳು ಕಂಡುಬಂದಿರುತ್ತದೆ. ವಾರ್ಡ್ ವ್ಯಾಪ್ತಿಯಲ್ಲಿ 12 ಶಾಲೆಗಳಲ್ಲಿ ಒಟ್ಟು 722 ಸಂಖ್ಯೆ ವಿಧ್ಯಾರ್ಥಿಗಳಿಗೆ ಮೊದಲನೇ ಡೋಸ್ ಹಾಗೂ ಒಟ್ಟು 99 ಸಂಖ್ಯೆ ವಿಧ್ಯಾರ್ಥಿಗಳಿಗೆ ಎರಡನೇ ಡೋಸ್ ಲಸಿಕೆಯನ್ನು ನೀಡಿರುವುದಾಗಿ ಸಭೆಯಲ್ಲಿ ತಿಳಿಸಿದರು.

2. **ಅಭಿಯಂತರರ ವಿಭಾಗದ ಬಗ್ಗೆ:-**

   - ಶ್ರೀ ಮಂಜುನಾಥ್ ಆರ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ಜೆ.ಸಿ. ನಗರದ 14ನೇ ಮುಖ್ಯರಸ್ತೆ 3ನೇ ಅಡ್ಡರಸ್ತೆ ಜಂಕ್ಷನ್‌ನಲ್ಲಿ ಕಲ್ವರ್ಟ್ ಅನ್ನು ನಿರ್ಮಿಸಿಕೊಡುವಂತೆ ಹಾಗೂ ಜೆ.ಸಿ.ನಗರದ 15ನೇ ಮುಖ್ಯರಸ್ತೆ 12ನೇ ಅಡ್ಡರಸ್ತೆಯಲ್ಲಿ ಮತ್ತು ಕುರುಬರಹಳ್ಳಿಯ 5ನೇ ಅಡ್ಡರಸ್ತೆಯಲ್ಲಿ ಸಿಸಿ ಕ್ಯಾಮೆರಾ ಅಳವಡಿಸಿಕೊಡುವಂತೆ ಸಭೆಯಲ್ಲಿ ಕೋರಿದರು.
   - ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ಸ್ಥಳಗಳಿಗೆ ಭೇಟಿ ನೀಡಿ ಅವಶ್ಯಕತೆಗೆ ಅನುಗುಣವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರು ವಾಡ್-75 ರವರಿಗೆ ಸಭೆಯಲ್ಲಿ ತಿಳಿಸಿದರು.
   - ಶ್ರೀ ಎನ್. ವಿ. ಬಾಹುಬಲಿ ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ಕಿರ್ಲೋಸ್ಕರ್ ಕಾಲೋನಿಯ 5ನೇ ಅಡ್ಡರಸ್ತೆಯಲ್ಲಿ ಹೆಚ್ಚಾಗಿ ಮಳೆ ನೀರು ಹರಿದು ಬರುವುದರಿಂದ ರಸ್ತೆಯಲ್ಲಿ ಕಲ್ವರ್ಟ್ ನಿರ್ಮಿಸಿಕೊಡುವಂತೆ ಸಭೆಯಲ್ಲಿ ಕೋರಿದರು.
   - ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿ ಬೃಹತ್ ನೀರುಗಾಲುವೆ ಇಲಾಖೆ, ಬಿಬಿಎಂಪಿ ರವರಿಗೆ ಪತ್ರಬರೆಯುವಂತೆ ಸಭೆಯಲ್ಲಿ ತಿಳಿಸಿದರು.

3. **ವಿದ್ಯುತ್ ವಿಭಾಗದ ಬಗ್ಗೆ:-**

   - ಶ್ರೀ ಸಿದ್ದರಾಜು ಸೋಸಲೆ ಮತ್ತು ಶ್ರೀ ಆರ್. ಮಂಜುನಾಥ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿಲ್ಲವಾಗಿ ಕಳೆದ ಸಭೆಯಿಂದಲೂ ದೂರಲಾಗಿದೆ ಆದರೂ ಇನ್ನೂ ಬಗೆಹರಿದಿರುವುದಿಲ್ಲವಾಗಿ ಸಭೆಯಲ್ಲಿ ದೂರಿದರು.
   - ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ಬಿದಿ ದೀಪಗಳನ್ನು ಶೀಘ್ರವಾಗಿ ಸರಿಪಡಿಲು ಕ್ರಮವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಶ್ರೀ ಅಬ್ದುಲ್, ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರು, ರವರಿಗೆ ಸಭೆಯಲ್ಲಿ ತಿಳಿಸಿದರು.

4. **ಪಶುಪಾಲನೆ ವಿಭಾಗದ ಬಗ್ಗೆ:-**

   - ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳು ಹೆಚ್ಚಾಗಿದ್ದು ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಹೆಚ್ಚಾಗುತ್ತಿರುತ್ತದೆ, ಆದುದರಿಂದ ಬೀದಿ ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಹಿರಿಯ ವೆಟರಿನರಿ ಪರಿವೀಕ್ಷಕರು ರವರಿಗೆ ಸಭೆಯಲ್ಲಿ ತಿಳಿಸಿದರು.

5. **ಕಂದಾಯ ವಿಭಾಗದ ಬಗ್ಗೆ:-**

   - ಕಿರ್ಲೋಸ್ಕರ್ ಕಾಲೋನಿಯ ನಾಗರೀಕರು ರವರು ಮಾತನಾಡುತ್ತಾ, ಮಳೆ ನೀರು ನುಗ್ಗಿದ ಮನೆಗಳಿಗೆ ಪರಿಹಾರ ನೀಡುವ ಹಣ ಇನ್ನೂ ಬಂದಿರುವುದಿಲ್ಲವಾಗಿ ಕಿರ್ಲೋಸ್ಕರ್ ಕಾಲೋನಿಯ ಫಲಾನುಭವಿಗಳು ಸಭೆಯಲ್ಲಿ ದೂರಿದರು.
   - ಶ್ರೀ ಸಿದ್ದರಾಮೇಶ್ವರ್, ಕಂದಾಯ ಪರಿವೀಕ್ಷಕರು, ವಾರ್ಡ್-75 ರವರು ಮಾತನಾಡುತ್ತಾ, ಬಜೆಟ್ ಅಲೋಕೇಷನ್‌ಗಾಗಿ ಕಡತವನ್ನು ಕಳುಹಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.
   - ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ಕಡತವನ್ನು ಅನುಸರಿಸಿ ಪ್ರಸ್ತುತ ಸ್ಥಿತಿಯನ್ನು ಮುಂದಿನ ಸಭೆಯಲ್ಲಿ ವರದಿ ಮಾಡಬೇಕಾಗಿ ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ.

Scanned by CamScanner

